ಬೇಕು ಎಂಬ ಸಂಕೀರ್ಣ ಮನಸ್ಥಿತಿಯಿಂದ ಹೋರಾಡಿದ ಕಾಲ. ನಮಗೆ ಅವರ ರಾಜಕೀಯ ಆಳ್ವಿಕೆ ಬೇಡ. ಆದರೆ ಅವರು ಕಲಿಸಿದ ಸಮಾನತೆಯ ಮೌಲ್ಯ, ಪಾರ್ಲಿಮೆಂಟರಿ ಪ್ರಜಾಪ್ರಭುತ್ವ ವ್ಯವಸ್ಥೆ ಬೇಕು. ಅವರ ದಾಸ್ಯ ಬೇಡ. ಆದರೆ ಜಗತ್ತಿನ ಜ್ಞಾನಕ್ಕೆ ತೆರೆದುಕೊಂಡ ಇಂಗ್ಲಿಷ್ ಭಾಷೆ ಬೇಕು, ಕಾನೂನಿನ ಆಡಳಿತ ಕ್ರಮ ಬೇಕು. ಅವರ ವಸಾಹತುಶಾಹಿ ಬೇಡ, ಆದರೆ ಅವರ ಮೂಲಕ ಬಂದ ಪಶ್ಚಿಮದ ವಿಜ್ಞಾನ, ತಂತ್ರಜ್ಞಾನಗಳು ಬೇಕು. ನಮ್ಮ ಅಸ್ಮಿತೆಯನ್ನು ಇಂತಹ ಒಂದು ಸಂಕೀರ್ಣ ಮನೋಭಾವದ ಸ್ವತಂತ್ರ ಸ್ಥಿತಿಯಲ್ಲಿ ನಾವು ಕಟ್ಟಿಕೊಳ್ಳಬೇಕಾಗಿತ್ತು. ಅಂತಹ ಸ್ಥಿತಿಯ ಒಂದು ಭಾಗವಾಗಿಯೇ ನಾವು; ಪೌರ್ವಾತ್ಯ ಹಾಗೂ ಪಾಶ್ಚಿಮಾತ್ಯ ಚಿಂತನೆ, ಮೀಮಾಂಸೆಗಳ ಸಾಮರಸ್ಯವನ್ನು ಕಾಣಬಯಸಿದ ನಮ್ಮ ಹಿರಿಯರ ಪ್ರಯತ್ನಗಳನ್ನು ಗುರುತಿಸಬೇಕು.



ಅಸ್ಮಿತೆಯ ಹುಡುಕಾಟದ ಈ ಸಾರ್ವತ್ರಿಕ, ಸಾರ್ವಜನಿಕ ಮುಖದ ಭಾಗವಾಗಿಯೇ ಸ್ವಾತಂತ್ರ್ಯ ಹೋರಾಟದ ಆ ಕಾಲಘಟ್ಟದಲ್ಲಿ ಕವಿಯೊಬ್ಬ ತನ್ನ ವೈಯಕ್ತಿಕ ನೆಲೆಯಲ್ಲಿ ನಡೆಸಿದ ತಾತ್ವಿಕ ಶೋಧನೆಯನ್ನೂ ಗಮನಿಸಬೇಕು. ಬೇಂದ್ರೆಯವರ ಮಟ್ಟಿಗೆ ಹೇಳುವುದಾದರೆ ಅವರು ಭಾವಾನುಭವದ ಮೂಲಕ ಕಾವ್ಯದಲ್ಲಿ ರಸಾನುಭೂತಿಗೆ ಹಾತೊರೆದ ಕವಿ. ಅವರ ದರ್ಶನದಲ್ಲಿ ಐಂದ್ರಿಯಿಕ, ರಸಾತ್ಮಕ, ಬೌದ್ಧಿಕ ಹಾಗೂ ಆಧ್ಯಾತ್ಮಿಕಗಳೆಂಬ ನಾಲ್ಕು ಹಂತಗಳ ಸೌಂದರ್ಯ ಶೋಧನೆ ಮುಖ್ಯವಾದೊಂದು ಅಂಶ. ಈ 'ನಾಲ್ಮೊಗ ದರ್ಶನ' ತನ್ನ ಜೀವನಕ್ಕೆ ಚತುರ್ಮುಖತೆಯನ್ನು ಕೊಟ್ಟಿದೆ ಎಂಬ ಮಾತನ್ನು ಸ್ವತಃ ಬೇಂದ್ರೆಯವರೆ ತಮ್ಮ 'ಸಾಹಿತ್ಯದ ವಿರಾಟ್ ಸ್ವರೂಪ' ಕೃತಿಯಲ್ಲಿ ಹೇಳಿದ್ದಾರೆ. 1917ರಲ್ಲಿ ಮಹರ್ಷಿ ಅರವಿಂದರ 'ಫ್ಯೂಚರ್ ಪೊಯೆಟ್ರಿ' (Future Poetry) ಲೇಖನ ಮಾಲೆಯನ್ನು 'ಆರ್ಯ' ಪತ್ರಿಕೆಯಲ್ಲಿ ಓದಿದಂದಿನಿಂದ ಪ್ರಾರಂಭವಾದ; 'ಗರಿ' ಕವನ ಸಂಕಲನದಲ್ಲಿ ಸ್ಪಷ್ಟ ರೂಹುಗಳ ಪಡೆದ 'ಚತುರ್ಮುಖ ಸೌಂದರ್ಯದ ಶೋಧನೆ' 1964ರಲ್ಲಿ ಪ್ರಕಟವಾದ 'ನಾಕುತಂತಿ'ಯಲ್ಲಿ ಒಂದು ಸ್ಪಷ್ಟ ನೆಲೆಯನ್ನು ಕಂಡುಕೊಂಡಿತು. ಆ ಹುಡುಕಾಟದ ಮಧ್ಯದ ಒಂದು ಘಟ್ಟ 'ಸಖೀಗೀತ' ಸಂಕಲನದಲ್ಲಿ ಪ್ರಕಟವಾದ 'ಮಾಯಾಕಿನ್ನರಿ' ಎಂಬ ಕವನ. ತನ್ನ ಈ ಶೋಧನಾ ಪ್ರಕ್ರಿಯೆಯಲ್ಲಿ ಕವಿ ತನ್ನ ಅಭಿವ್ಯಕ್ತಿಗೆ ಅನುಕೂಲವಾಗುವ ಭಾಷೆಯನ್ನು ಪಡೆದುಕೊಳ್ಳಲು ಮಾಡಿದ ಪ್ರಯತ್ನದ ಒಂದು ಭಾಗವಾಗಿಯೂ ಈ ಕವನವನ್ನು ಗ್ರಹಿಸಬಹುದು. ನಾಕುತಂತಿಯ ಭಾಷಾಭಿವ್ಯಕ್ತಿಯ ಜೊತೆ ಮಾಯಾಕಿನ್ನರಿಯ ಭಾಷೆಯನ್ನು ಹೋಲಿಸಿ ನೋಡಿದಾಗಲೂ ಅದು ಸ್ಪಷ್ಟವಾದೀತು.